ದಿನಾಂಕಃ 18-11-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ. ಟಿ. ಕೆ. ಆರ್. ವಕೀಲರಿಂದ

1. ರಾಮಕೃಷ್ಣ ನನ್ನ ತಂದೆ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರು ಲಕ್ಷ್ಮಣ ಎಂದು ನುಡಿಯುತ್ತಾರೆ. ನನ್ನ ಜನಕ ತಂದೆಯ ಹೆಸರು ರಾಮಕೃಷ್ಣ ಎಂದರೆ ಸರಿ. ನಾನು ನಮ್ಮ ಗ್ರಾಮದಲ್ಲಿ ಟೀ ಅಂಗಡಿ ನಡೆಸುತ್ತಿದ್ದೇನೆ ಹಾಗೂ ವ್ಯವಸಾಯವನ್ನು ಸಹ ಮಾಡುತ್ತೇನೆ. ನಾನು ವರ್ಷಕ್ಕೆ 10 ಲಕ್ಷ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತೇನೆ. ಸದರಿ 10 ಲಕ್ಷದ ಪೈಕಿ ನಾನು ವರ್ಷಕ್ಕೆ ಸುಮಾರು 4 – 5 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ದಿನಾಂಕಃ 10-09-2022 ರಂದ 15-09-2022 ರವರೆಗೆ ನನ್ನ ಬಳಿ 4,50,000/- ರೂಪಾಯಿಗಳು ಇತ್ತು ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಆದಾಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅವುಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ.

2. ಆರೋಪಿ ನನಗೆ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿ ಯಾರ ಬಳಿ ಸಾಲ ಮಾಡಿರುತ್ತಾರೆ ಎಂಬುದನ್ನು ನನ್ನ ಬಳಿ ಹೇಳಿರಲಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ತನ್ನ ಗೃಹ ಕೃತ್ಯದ ಖರ್ಚುಗಳಿಗೆ ಹಣ ಬೇಕು ಎಂದು ನನ್ನ ಬಳಿ ಕೇಳಿದ್ದರು ಎಂದು ನುಡಿಯುತ್ತಾರೆ. ಆರೋಪಿ ನನ್ನ ಅಂಗಡಿಯ ಬಳಿ ಬಂದು ಹಣ ಕೇಳಿದ್ದರು. ಆ ಸಮಯದಲ್ಲಿ ನನ್ನನ್ನು ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿ ನನ್ನಿಂದ ಹಣ ಕೇಳಿದ 5 ದಿನಗಳ ನಂತರ ನಾನು ಅವರಿಗೆ ಹಣ ನೀಡಿರುತ್ತೇನೆ. ಸದರಿ ದಿನದಂದೂ ಸಹ ನನ್ನನ್ನು ಹಾಗೂ ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿಗೆ ನಾನು ನಮ್ಮ ಹಳ್ಳಿಯ ಬಳಿ ಇರುವ ಒಂದು ತೋಟದ ಬಳಿ ಹಣವನ್ನು ನೀಡಿರುತ್ತೇನೆ. ಸದರಿ ತೋಟ ಯಾರಿಗೆ ಸೇರಿದ

ತೋಟದ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಹಣ ಪಡೆದ ದಿನದಂದು ಸದರಿ ಹಣದ ಭದ್ರತೆಗಾಗಿ ನನಗೆ ಚೆಕ್ಕನ್ನು ನೀಡಿರುತ್ತಾರೆ. ಚೆಕ್ಕಿನಲ್ಲಿ ಇರುವ ಬರವಣಿಗೆಗಳನ್ನು ಆರೋಪಿ ಮೊದಲೇ ಬರೆಯಿಸಿ ತಂದಿದ್ದರು. ಆರೋಪಿಗೆ 4,50,000/- ರೂಪಾಯಿಗಳನ್ನು ನೀಡುವಷ್ಟು ಹಣ ನನ್ನ ಬಳಿ ಇರಲಿಲ್ಲ ಮತ್ತು ಅಷ್ಟು ಹಣ ನೀಡುವ ಆರ್ಥಿಕ ಚೈತನ್ಯ ನನ್ನ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ಜನಕ ತಂದೆ ರಾಮಕೃಷ್ಣ ರವರು ಚೀಟಿ ವ್ಯವಹಾರ ಮಾಡುತ್ತಿದ್ದು ಆರೋಪಿ ಸಹ ಸದರಿ ಚೀಟಿಯಲ್ಲಿ ಒಬ್ಬ ಸದಸ್ಯರಾಗಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿಯಲ್ಲಿ 35 ಸದಸ್ಯರು ಇದ್ದು ಅದು 4,50,000/- ರೂಪಾಯಿಗಳ ಚೀಟಿ ಆಗಿತ್ತು ಎಂದರೆ ಸರಿಯಲ್ಲ. ಸದರಿ ಚೀಟಿಗೆ ತಿಂಗಳಿಗೆ 15,000/- ಗಳ ಕಂತುಗಳು ಆಗಿತ್ತು ಎಂದರೆ ಸರಿಯಲ್ಲ. ಆರೋಪಿ 2 ನೇ ಚೀಟಿಯನ್ನು ಕೂಗಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿಯ ಭದ್ರತೆಗಾಗಿ ಆರೋಪಿಯು ತನಗೆ ಸೇರಿದ ಎರಡು ಚೆಕ್ಕುಗಳನ್ನು ಹಾಗೂ ತನ್ನ ಹೆಂಡತಿಯ ಒಂದು ಚೆಕ್ಕನ್ನು ರಾಮಕೃಷ್ಣ ರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಎರಡು ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ಸದರಿ ರಾಮಕೃಷ್ಣ ರವರು ನನಗೆ ನೀಡಿ ಆರೋಪಿಯ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಆರೋಪಿಯ ಹೆಂಡತಿಯ ಚೆಕ್ಕನ್ನು ಉಪಯೋಗಿಸಿ ರಾಮಕೃಷ್ಣ ರವರು ಆರೋಪಿಯ ಹೆಂಡತಿಯ ವಿರುದ್ಧ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

<u>(ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ.